ಲಿಖಿತ ಮೂಲಕ ಉತ್ತರಿಸುವ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಮಂಗಳವಾರ, ದಿನಾಂಕ : 03 ನೇ ಮಾರ್ಚ್, 2020

ತೊಗರಿ ಖರೀದಿ ಕೇಂದ್ರಗಳ ಬಗ್ಗೆ

ಶ್ರೀರಘುನಾಥ್‌ರಾವ್ ಮಲ್ಕಾಪೂರೆ(ವಿಧಾನಸಭೆಯಿಂದಚುನಾಯಿತರಾದವರು):-

135 (185) ಮಾನ್ಯ ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿ ತೊಗರಿ ಖರೀದಿ ಕೇಂದ್ರಗಳೆಷ್ಟು ; ಯಾವ ಯಾವ ಸಂಸ್ಥೆಗಳಿಗೆ/ಸೊಸೈಟಿಗಳಿಗೆ ವಹಿಸಲಾಗಿದೆ ; (ತಾಲ್ಲೂಕುವಾರು ಕೇಂದ್ರಗಳವಾರು ಸಂಪೂರ್ಣ ಮಾಹಿತಿ ನೀಡುವುದು)

(ಆ) ಬೀದರ್ ಜಿಲ್ಲೆಯ ಖರೀದಿ ಕೇಂದ್ರಗಳಲ್ಲಿ ರೈತರಿಂದ ಹಣ ಪಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಅದನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು;

(ಇ) ಸರ್ಕಾರವು ಈ ವರ್ಷ ಪ್ರತಿ ಕ್ವಿಂಟಲ್ ತೊಗರಿ ಮತ್ತು ಇತರ ದ್ವಿಧಾನ್ಯಗಳಿಗೆ ಎಷ್ಟು ದರ ನಿಗಧಿ ಮಾಡಲಾಗಿದೆ ; (ಸ್ಪಷ್ಟ ಮಾಹಿತಿ ನೀಡುವುದು)

(ಈ) ಸುಮಾರು ಸೊಸೈಟಿಗಳು ಖರೀದಿ ಕೇಂದ್ರಗಳಲ್ಲಿ ಕ್ವಿಂಟಲ್‌ಗೆ 2/3 ಕೆ.ಜಿ. ಧಾನ್ಯವನ್ನು ಮತ್ತು ರೈತರಿಂದ ಅಧಿಕಾರಿಗಳು /ಸಿಬ್ಬಂದಿಗಳು ಹಣ ಪಡೆಯುತ್ತಿರುವುದು ನಿಜವೇ ?